ಕೊಳಗೀಬೀಸ

ಸಹಜಾನಂದ

ಅವಧೂತ ಚರಿತ್ರೆ

(ಷಟ್ಪದಿಯಲ್ಲಿ)

ಲೇಖಕರು:

ಗಣಪತಿ ಅಣ್ಣಪ್ಪ ಹೆಗಡೆ

ಜಾಗನಳ್ಳಿ.

ಬೆಲೆ ೦—೬೫

ಪ್ರಥಮ ಮುದ್ರಣ.

ಎಲ್ಲಹಕ್ಕುಗಳೂ ಲೇಖಕರವು.

ಬೆಲೆ: ೦—೬೫

ಮುದ್ರಣ.

ಶ್ರೀ ರಾಜ ರಾಜೇಶ್ವರಿ ಪ್ರೆಸ್, ಶಿರಸಿ.

ನನ್ನ ಮಾತು.

ನಮ್ಮ ಊರಿನಲ್ಲಿಯೋ ಹುಟ್ಟಿ ನಮ್ಮೆದುರಿನಲ್ಲಿಯೋ ಹೇಳಲಸದಳವಾಗುವಂಥ ಕಷ್ಟವನ್ನು ಅನುಭವಿಸಿ, ನಮ್ಮ ಮುಂದೆಯೇ ಮಹಾ ಪೀಠದಲ್ಲಿ ಮಂಡಿಸಿ ನಮ್ಮಿಂದಲೇ ಪೂಜೆಗೊಂಡು ನಮ್ಮ ಹಿತವನ್ನೇ ಹಾರೈಸಿ ನಮ್ಮನ್ನು ಆನಂದ ಸಾಗರದಲ್ಲಿ ತೇಲಿಸಿ ನಮ್ಮನ್ನಗಲಿದ "ಶ್ರೀ ಸದಾನಂದ ಅವಧೂತಸ್ವಾಮಿ" ಕೊಳಗೀಬೀಸ ಇವರ ಜೀವನ ಚರಿತ್ರೆಯನ್ನು ಸೂಕ್ಷ್ಮ ರೀತಿಯಲ್ಲಿ ತಮ್ಮೆಲ್ಲರ ಮುಂದಿಡುತ್ತೇನೆ.

ನಾನು ವಿದ್ಯೆಯ ಹಿರಿಮೆಯಿಂದಲೋ ಅಥವಾ ಬುದ್ಧಿಯ ಪ್ರಭಾವದಿಂದಲೋ ಬರೆದಿರುವೆನೆಂತ ಹೇಳುತ್ತಾರೆ. ಇದಕ್ಕೆ ದೈವಾನುಗ್ರಹ ಹಿರಿಯರ (ಅನುಭವಿಕರ) ಬೆಂಬಲವೇ ಕಾರಣ. ನಾನು ಈ ಚರಿತ್ರೆಯನ್ನು ಪ್ರಾರಂಭಸಿದ್ದು ಅವಧೂತರು ಮುಕ್ತರಾದ ಒಂದು ಪಕ್ಷಕ್ಕಿಂತ ಮೊದಲೇ. ಆದರೆ ಅದು ಪೂರ್ತಿಯಾಗದೆ ಅರ್ಧಕ್ಕೇ ನಿಂತಿತ್ತು. ಕಾರಣ ಅವರು ಅನುಭವಿಸಿದ ಕಷ್ಟಸುಖಗಳ ಪರಿಚಯ ನನಗಿಲ್ಲದೆ ತಿಳಿದಂತವರನ್ನು ಕೇಳಿ ಕೇಳಿ ಬರೆಯಬೇಕಾಯಿತು. ಹಾಗೆಬರೆದು ಎಂಬತ್ತು ನುಡಿಯಾಗಿರುವಾಗ–ನಮ್ಮಲ್ಲಿ ಭಾಗವತರಿಗೆ ತೋರಿಸಲಾಗಿ| ಅದೇಸಂದರ್ಭದಲ್ಲಿ ಅವಧೂತರ ತಾಯಿಯು ನಮ್ಮಲ್ಲಿ ಬಂದಿರಲು. ಅವರು ಇದನ್ನು ನೋಡಿ ಕೆಲವು ವಿಷಯವನ್ನು ತಿಳಿಸಿರಲು ಇವೆಲ್ಲವನ್ನೂ ಸೇರಿಸಿ ಒಂದು ನೂರುಸಲ್ಲಿನಮೇಲೆ ಮಾಡು ಅಂತ ಭಾಗವತರು ಹೇಳಲಾಗಿ ಮತ್ತೆ ಮುಂದುವರೆಸಿ ಅಲ್ಲಲ್ಲಿ ನನಗೆ ಇವರಿಂದ ತಿಳಿದ, ಇನ್ನಿತರರಿಂದ ಅರಿತ, ವಿಷಯವೆಲ್ಲ ಸೇರಿಸಿಬರೆಯಲು ನೂರಾಐದು ನುಡಿಗೆ ಮಂಗಲವಾಯಿತು. ಇದನ್ನು ಕೆಲವು ಹಿರಿಯರಿಗೆ ತೋರಿಸಿ ತಿದ್ದುಪಡಿಯನ್ನು ಮಾಡಿಸಿದೆ. ಅವರಲ್ಲಿ ವೇದಮೂರ್ತಿ "ನಾರಾಯಣಭಟ್ಟ"ರು. ಮಾಡಗೇರಿ ಇವರೂಸೇರಿದ್ದಾರೆ, ನಂತರ''ರಾಮಾನಂದಸ್ವಾಮಿ" ಕೊಳಗೀಬೀಸ ಇವರಿಗೆ ತೋರಿಸಲಾಗಿ. ಇದುಯೋಗ್ಯವಿದೆ. ಇದನ್ನು ಬೆಳಕಿಗೆ ತರಬಹುದು ಇದು ಶೀಘ್ರದಲ್ಲಿಯೇ ಯಶಸ್ವಿಯಾಗಲೆಂದು ನನ್ನ ಆಶೀರ್ವಾದವಿದೆ ಅಂತ ಹೇಳಿ ನಮಗೆ ಮಂತ್ರಾಕ್ಷತೆಯನ್ನು ಕೊಟ್ಟುಕಳುಹಿದ್ದಾರೆ. ಮತ್ತೆ "ವಿಘ್ನೇಶ್ವರ ಶರ್ಮಾ, ತದ್ದಲಸೆ ಇವರಿಗೆ ತೋರಿಸಲಾಗಿ ಅವರು ಮುನ್ನುಡಿಯನ್ನು ಬರೆ

ಯಲು ಸಂತೋಷದಿಂದ ಒಪ್ಪಿ ಬರೆದುಕೊಟ್ಟಿದ್ದಾರೆ. ಇವರಿಗೆನನ್ನ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಸಕಾಲಕ್ಕೆ ಮುದ್ರಿಸಿಕೊಟ್ಟ "ರಾಜರಾಜೇಶ್ವರಿ ಪ್ರಿಂಟಿಂಗ್ ಪ್ರೆಸ್ ಇವರಿಗೂ. ನನಗೆ ವಿಷಯಸಂಗ್ರಹಿಸಿಕೊಟ್ಟ ಅನೇಕರಿಗೂ ನನ್ನ ವಂದನೆಸಲ್ಲಿಸುತ್ತೇನೆ. ಮತ್ತೆ ಈ ಪ್ರತಿಯಲ್ಲಿ ಪ್ರಿಂಟ್ ಮಾಡುವಾಗ ಕೆಲ ವುಅಕಸ್ಮಿವಾಗಿ ತಪ್ಪಾಗಿವೆ. ಅದಕ್ಕಾಗಿ ನಜರಿಗೆಬಂದತಪ್ಪಿಗೆ ಒಪ್ಪೋಲೆಯನ್ನು ಮಾಡಲಾಗಿದೆ. ಓದುಗರು, ಇದನ್ನು ಗಮನದಲ್ಲಿ ತಂದು ಸರಿ ಮಾಡಿಯೋಓದಬೇಕಾಗಿ ಬೇಡಿಕೊಳ್ಳುತ್ತೇನೆ.

ಲೇಖಕ.
ಗಣಪತಿ ಅಣ್ಣಪ್ಪ ಹೆಗಡೆ.
ಜಾಗನಳ್ಳಿ.

ಆಶೀರ್ವಚನ

ನಮ್ಮ ಭಜಕವೃಂದದಲ್ಲಿ ಸೇರಿದ ಗಣಪತಿ ಅಣ್ಣಪ್ಪ ಹೆಗಡೆ ಜಾಗನಳ್ಳಿ ಈತನು ಅವದೂತರ ಚರಿತ್ರೆಯನ್ನು ಬರೆದು ನನಗೆ ತೋರಿಸಿದಾಗ ಅದು ಬೆಳಕಿಗೆ ಬರಲು ಯೋಗ್ಯವಾಗಿದೆ. ಅದರಲ್ಲಿ ಲೋಪವೇನು ಕಾಣುವದಿಲ್ಲ. ಇದಕ್ಕೆ ನನ್ನ ವಿಶ್ವಾಸ ಪೂರ್ತಿ ಆಶೀರ್ವಾದವಿದೆ. ಇದು ನಮ್ಮ ಭಕ್ತವೃಂದಗಳಿಗೆ ಅವದೂತರು ಅನುಭವಿಸಿದ ಕಷ್ಟ-ಸುಖಗಳ ಮತ್ತು ತಪ ಪ್ರಭಾವದ ಸೂಕ್ಷ್ಮಅನುಭವವಾಗುತ್ತಿದೆ. ಆ ಕಾರಣ ಇದನ್ನು ಅವಶ್ಯಬೆಳಕಿಗೆ ತರಬಹುದು ಅಂತ ಮಂತ್ರಾಕ್ಷತೆಯಿತ್ತಿರುವೆ.

ರಾಮಾನಂದಸ್ವಾಮಿ
ಕೊಳಗೀಬೀಸ.

ಮುನ್ನುಡಿ.

ಶ್ರೀಮತ್ ಪರಮಪೂಜ್ಯ ಶ್ರೀ ಶ್ರೀ ಸಹಜಾನಂದ ಅವಧೂತ ಸ್ವಾಮಿಗಳವರ ದಿವ್ಯ ಚರಿತ್ರೆಯು ಈ ಪುಸ್ತಕಕ್ಕೆ ಮುನ್ನುಡಿ ಬರೆಕೊಡಿ ಎಂದು ಸ್ನೇಹಿತರು ಕೇಳಿದರು ಒಪ್ಪಿ ಕೊಂಡು ಬರೆಯಲು ತೊಡಗಿದಾಗ ಈ ಪುಸ್ತಕಕ್ಕೂ ಮುನ್ನುಡಿ ಬೇಕೇ? ಬೇಕಾದರೆ ಏನು ಬರೆಯೋಣ? ಎಂಬ ವಿಚಾರ ಬಂದಿತು, ಆದರೂ ಪುಸ್ತಕಕ್ಕೆ ಮುನ್ನುಡಿ ಬೇಕೇ ಬೇಕು ಎಂಬ ಇತ್ತೀಚಿಯ ಅಭಿಪ್ರಾಯವೋ. ಸಂಪ್ರದಾಯವೋ ಅಂತೂ ಈ ಹೆಸರಿನಲ್ಲಿ ಆರಂಭವಾಗ ಬೇಕಾದ ಈ ಪುಸ್ತಕಕ್ಕೆ ಶುಭ ಕೋರಿಕೆಯು ಸಾಕ್ಷಿಗಾಗಿ ನಾಲ್ಕು ಮಾತು ಬರೆಯುತ್ತಿದ್ದೇನೆ.

ಶ್ರೀ ಸ್ವಾಮೀಜಿಯವರ ಚರಿತ್ರೆ ನಮ್ಮ ತಾಲೂಕಿನ ಜಾಗನಳ್ಳಿಯಲ್ಲಿ ಹುಟ್ಟಿ ಬೆಳೆದು ಹೆಚ್ಚಿನ ವಿದ್ಯಾಭ್ಯಾಸವಿಲ್ಲದಿದ್ದರೂ ಭಗವತ್ ಚಿಂತನೆಯಿಂದ ಆತ್ಮಸಾಕ್ಷಾತ್ಕಾರ ಪಡೆದು ಸಾಧಕರಲ್ಲಿಯೇ ಮಹಾನ್ ಸಾಧಕರಾಗಿ, ಯೋಗಿಗಳಲ್ಲಿಯೇ ಮಹಾನ್ ಯೋಗಿಗಳಾಗಿ ದಿವ್ಯ ದರ್ಶನ ಪಡೆದ ಅವನ ಭವ್ಯ ಚರಿತ್ರೆ ಪುಣ್ಯ ತಮವಾದುದಲ್ಲದೇ ನಮಗೆ ಅನೇಕವಿಷಯ ವಿಚಾರ ವ್ಯವಹಾರಗಳ ಅನುಭವವನ್ನೂ ತರುವಂಥದಾಗಿದೆ. ಅನುಸರಿಸ ಬೇಕಾದುದನ್ನು ಹೇಳುವಂಥದೂ ಆಗಿದೆ.

ಗೀತೆಯಲ್ಲಿ ಭಕ್ತಿಯೋಗದ ವಿಚಾರ ಹೇಳಿದೆ. ಪರಮಾತ್ಮ ಸಾಕ್ಷಾತ್ಕಾರಕ್ಕೆ ಇದು ಸುಲಭವೆಂದು ಗೀತೆಯು ಅಭಿಪ್ರಾಯ. ಸಾಧಕನು ಪರಮಾತ್ಮನಲ್ಲಿ ನಿಶ್ಚಲಭಾವದಿಂದ, ಅನನ್ಯ ಭಾವದಿಂದ ನಂಬಿ ನಡೆದರೆ ಸಾಕು ಮುಂದಿನ ಯೋಗ ಕ್ಷೇಮಗಳನ್ನು ಪರಮಾತ್ಮನೇ ನೋಡುವನು.

ಈ ವಿಚಾರ ದರ್ಶನ ಶ್ರೀ ಸ್ವಾಮೀಜಿಯವರ ಜೀವನದಲ್ಲಿ ಕಾಣ ಬಹುದುದಾಗಿದೆ. ಪ್ರಪಂಚದಿಂದ ಪರಮಾತ್ಮನೆಡೆಗೆ ಸಾಗಬೇಕಾದುದೇ ನಮ್ಮ ಜೀವನ ತತ್ವ, ಎಂಬುದನ್ನು ಅವರು ತೋರಿಸಿದರು.

ಪ್ರಪಂಚದಿಂದ ನಿವೃತ್ತಿ ಬಯಸಿ ಪರಮಾತ್ಮ ದರ್ಶನಕ್ಕಾಗಿ ಹಂಬಲಿಸುತ್ತಿರುವಾಗಲೇ ಅವರಿಗೆ ಶ್ರೀ ಶ್ರೀಧರ ಸ್ವಾಮಿಗಳ ಉಪದೇಶ ಆಶೀರ್ವಾದ ಲಭಿಸಿತು ಅವರ ಉಪದೇಶದಂತೆ "ರಾಮ" ನಾಮದ ಪುನಶ್ಚರಣೆ ಆರಂಭಿಸಿದರು. ಅನೇಕ ವರ್ಷಗಳವರೆಗೆ ಅನೇಕ ಸಿದ್ಧಿ ಕ್ಷೇತ್ರಗಳಲ್ಲಿ ಕಠಿಣತರ ತಪವನ್ನಾಚರಿಸಿದರು. ಅವರ ನಿಶ್ಚಲ ಮನೋಭಾವ, ರಾಮ ನಾಮದ ಮಹಾಶಕ್ತಿ ಅವರ ಜೀವನಕ್ಕೆ ಚೇತನ ತಂದಿತು. ಪರಮಾತ್ಮದರ್ಶನ ಮಾಡಿಸಿತು.

ಕೊಳಗೀಬೀಸದಲ್ಲಿ ಅವರು ನಡಿಸಿದ ಕಾರ್ಯಗಳೇನು ಸಂಣಪ್ರಮಾಣಗಳಲ್ಲ. ಆದರೂ ಅವರು ಈ ಪವಾಡ ನಡಿಸಿ ಜನತೆಗೆ ಆಶ್ಚರ್ಯವುಂಟು ಮಾಡುವ ಕೃತಿಗಳಿಗೆ ಹೋಗುತ್ತಿರಲಿಲ್ಲ. ಇವರಲ್ಲಿ ಯಾವ ಅರ್ಥವಿದೆ? ಜನತಾವಾಗಿಯೇ, ಹೃದಯ ಮನಸ್ಸುಗಳಿಂದ ಪರಮಾತ್ಮ ದರ್ಶನಕ್ಕೆ ಬರಬೇಕೇ ಹೊರತು ಏನಾದರೂ ಆಶೆ ಆಕರ್ಷಣೆಗಳಿಂದ ಅವರ ಮನಸ್ಸನ್ನು ತಿರುಗಿಸುವುದು ಸಾಧುವಲ್ಲ. ಎನ್ನುತ್ತಿದ್ದರು. ಕೊಳಗೀಬೀಸದ ಮಾರುತಿ ದೇವರಿಗೆ ಭವ್ಯ ಇಮಾರತು; ಗೋಶಾಲೆ, ಅತಿಥಿ ಸೇವೆಗೆ ವ್ಯವಸ್ಥೆ, ಇವೆಲ್ಲ ಅಲ್ಲಿ ನಿರ್ಮಾಣಗೊಂಡಿವೆ. ಸದಾಕಾಲ ಅಲ್ಲಿ ನಡೆಯುವ ಪೂಜೆ, ಪ್ರಾರ್ಥನೆ, ಪ್ರವಚನ, ಮುಂತಾದವುಗಳಿಂದ ನಿರ್ಮಾಣಗೊಂಡ ಸುಪ್ರಸನ್ನ ವಾತಾವರಣ ಜಿಜ್ಞಾಸುವಿಗೆ ಅಪಾರ ಆನಂದವನ್ನೂ, ಸಂಸ್ಕಾರವನ್ನೂ ನೀಡುತ್ತದೆ. ಇಂಥ ಮಹಾನ್ ಯೋಗವನ್ನೂ ಕ್ಷೇಮವನ್ನೂ ಶ್ರೀ ಸ್ವಾಮಿಜೀಯವರು ಸಾಧಿಸಿದ್ದಾರೆ. ಭಕ್ತರು ತಮ್ಮ ಕಷ್ಟಗಳಿಂದ ಬೇಡಿಕೊಂಡಾಗ "ದೇವರನ್ನು ನಂಬಿ, ಭಕ್ತಿಯಿಂದ ಬೇಡಿಕೊಳ್ಳಿ, ನಿಮ್ಮ ಕಷ್ಟಪರಿಹರಿಸುತ್ತಾನೆ" ಎಂಬುದಾಗಿ ಅಭಯ ನೀಡುತ್ತಿದ್ದರು.

ಇಂಥ ಶಕ್ತಿಯುಳ್ಳ ಸ್ವಾಮೀಜಿಯವರ ಚರಿತ್ರೆ ಸ್ಫೂರ್ತಿದಾಯಕವಾದುದಾಗಿದೆ ಅದನ್ನು ಸ್ನೇಹಿತರಾದ ಶ್ರೀಯುತ ಗಣಪತಿ ಅಂಣಪ್ಪ ಹೆಗಡೆಯವರು ಚಿಕ್ಕದಾದರೂ ಚೊಕ್ಕಟವಾಗಿ ರಚಿಸಲು ಮುಂದೆ ಬಂದಿದ್ದಾರೆ ಹಳ್ಳಿಯ ಜನಕ್ಕೆ ಹೆಚ್ಚು ಪ್ರಿಯವೆನ್ನಿಸುವ ರಾಗದಲ್ಲಿ ರಚಿಸಿದ್ದು ತುಂಬಾ ಉಪಯುಕ್ತವಾಗಿದೆ. ವಿಷಯ ಸಂಗ್ರಹ ವಿವರಣೆ, ರಾಗ-ಪ್ರಾಸಗಳ ಜೋಡಣೆ, ಮುಂತಾದ ಗಮನಿಸಬೇಕಾದ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಿದ್ದಾರೆ. ಪುಸ್ತಕದ ಅಂತಃ ಸತ್ವವನ್ನೂ ಹೆಚ್ಚಿಸಿದ್ದಾರೆ.

ಈಗಾಗಲೇ ಇವರು ಹಾಡು-ಭಜನೆಗಳ ಮೂಲಕ ಜನಯಪ್ರಿರಾಗಿದ್ದು ಈ ಚರಿತ್ರೆಯೂ ಹೆಚ್ಚಿನ ಯಶಸ್ಸನ್ನು ತರಬಹುದಾಗಿದೆ. ಇನ್ನೂ ಅನೇಕ ಉತ್ತಮ ಕೃತಿಗಳು ಇವರಿಂದ ಪ್ರಕಟಗೊಳ್ಳಲಿ.

ಈ ಚರಿತ್ರೆ ಓದುಗರಿಗೆ ಸ್ಫೂರ್ತಿಯನ್ನೂ ಚೇತನವನ್ನೂ ತರಲಿ, ಪ್ರಪಂಚ ಪರಮಾರ್ಥಗಳ ಸಮನ್ವಯ ಸಾಧನೆಗೆ ಮಾರ್ಗದರ್ಶನ ಮಾಡಲಿ.

ತದ್ದಲಸೆ.
೧೦-೨-೬೮

ತದ್ದಲಸೆ ವಿಘ್ನೇಶ್ವರ ಶರ್ಮಾ

★

ಅವದೂತ ಪೂಜೆ

ಧಾಟಿ: "ರಾಮಚಂದ್ರನೆ ಪಾಲಿಸೋ"

ಪೂಜೀಪೆ ಗುರುನಾಥನ | ಅವದೂತ ರೂಪನ | ಪೂಜಿಪೆ
ಗುರುನಾಥನ ||ಪ|| ಪೂಜಿಪೆನು ನೋಡದಲಿ ಆ ರವಿ | ತೇಜ
ಪೂರ್ಣವ ಬೀರುತಿರುವನ | ರಾಜರಾಜರ ವಂದ್ಯಗೀಗನಿ | ರಾಜ
ನವನೆತ್ತುತ್ತ ಹರ್ಷದಿ ||೧|| ಹರಿಯು ನೀನೀಗೆನ್ನುತ | ಮತ್ತಲ್ಲ
ದಾಹರ | ಸರಸಿಜೋದ್ಭವ ಖಂಡಿತ || ಅರಿತೆನಾ ಅಂತರ್ಯಭಾವದಿ |
ಧರಣಿಯೊಳಗಿಹಸಜ್ಜನರ ಮನ | ದಿರವ ಸಲಿಸಲು ಬಂದ ಯೋ |
ಗೀಶ್ವರನ ಪಾದಾಂಬುಜವ ನೀಗಲು ||೨|| ಧರೆಯೊಳತ್ಯಧಿಕವಾದ |
ಆ ಜಾಗನಳ್ಳಿಯ | ಪುರದೊಳಗುದಿಸಿ ಬಂದ || ಸ್ಥಿರಮನದಿ ಭಜಿ
ಸಂತ ಭಕ್ತರು | ಕರೆಯುತಿರಲದ ಕೇಳಿ ಬೇಗನೆ | ತೊರೆದು
ಸಂಸಾರದ ಸುಕಂಗಳ ಭರದಿ ನಿಜವೇಷದಲಿ ನಿಂದನ ||೩||

ಭಾಮಿನಿ ಷಟ್ಪದಿ

ಸ್ಮರಿಸು ತಲಿ ಕರಿಮುಖನ ಶಾರದೆ |
ಗೆರಗಿ ಸದ್ಭಾವದಲಿ ಹರಿ ಹರ |
ಸರಸಿ ಜೋದ್ಭವರಿಂಗೆ ಮಣಿಯುತ ಸಿರಿಗೆ ವಂದಿಸುತ ||
ಗಿರಿಜೆಯನು ಕೊಂಡಾಡಿ ಸನ್ಮುನಿ |
ವರರನೇಕರ ಸ್ತುತಿಸಿ ಮನದಲಿ |
ತರಳನಿಗೆ ಜ್ಞಾನವನು ನೀಡಿರೆನುತ್ತ ಪ್ರಾರ್ಥಿಸುತ ||೧||

ಧರೆಯೊಳ್ ಜಾಗನ ಹಳ್ಳಿ ಪುರದಲಿ |
ಇರುವ "**ಗಣಪತಿ**" ಯೆಂಬ ನಾಮದ ||
ತರಳ ಬರೆದಪ ದೂತ ಸೂಕ್ಷ್ಮ ಚರಿತ್ರೆ ಯನುಕಂಡ ||
ಪರಮ ಸುಜ್ಞಾನಿಗಳು ತಪ್ಪಿರ |
ಲರುಹಿದರೆ ನಾ ತಿದ್ದಿ ಕೊಂಬೆನು |
ಕರುಣೆ ದೋರಿರಿ ಎನ್ನೊಳಗೆ ಎನು ತೋರೆವೆ ನೀಕಥೆಯ ||೨||

ಧರೆಯೊಳುತ್ತರ ಕನ್ನಡದಿ ಮೆರೆ |
ದಿರುವ ಸಿರಸಿಗೆ ಸೇರಿದಾ ಪುರ |
ವರವು ಜಾಗನ ಹಳ್ಳಿಯಲಿ ಕೌಶಿಕನ ಗೋತ್ರದಲಿ ||
ಇರುವ ಕೇಶವ ನೆಂಬ ನಾಮದಿ |
ಮೆರವ ನಾಸತಿ "**ಭಾಗಿರಥಿ**" ಯೊಳು
ತರಳನಾಗುದಿಸಿದನು "**ನಾರಾಯಣ**" ಸುನಾಮದಲಿ ||೩||

ಅವಗೆ ಹುಟ್ಟಿದ ಎಂಟು ಮಂದಿಗ |
ಳವರೊಳೀರ್ವರು ಹೆಣ್ಣು ಮಕ್ಕಳು |
ಇವಗೆ ಗಂಡಾಗಿರುವ ರಾರೇ ಮಂದಿ ಅವರೊಳಗೆ |
ಕುವರ ನೋರ್ವನು ಅಳಿಯೆ ಇರುತಿಹ |
ಕುವರ ರೈವರ ಸಾಕಿ ಸಲಹುತ |
ಅವರು ಸಂತಸದಿಂದ ವಿದ್ಯಾ ಬುದ್ಧಿ ಕಲಿಸುತಲಿ ||೪

ತನ್ನ ಸಂಸಾರವನು ಸಾಗಿಸು |
ತನ್ನ ಜನರಿಗೆ ಯೋಗ್ಯ ನಿವನೆಂ |
ದೆನ್ನಿಸಿಯೆ ಮೆರೆಯುತ್ತಲಿರ್ದನು ತಂದೆ ಕೇಶವನು |
ಚಿಣ್ಣರಿಗೆ ಸದ್ಗುರುವಿನಲ್ಲಿಯೆ |
ಮನ್ನಣೆಯೊಳ್ ವಿದ್ಯವನು ಹೇಳಿಸೆ |
ಉನ್ನತಿ ಯೊಳ್ಳೈದೆತ್ತೆ ಮುಗಿಸಿದ ನಾರಾಯಣ ತಾನು ||೫

ತರಳತನ್ನದೊಳಗಿವನು ತನ್ನಯ |
ಸರಿಜನರೊಳಾಡುವನು ದೇವನ |
ಗುರು ಹಿರಿಯರನು ಜಪಿಸುತಿರೆ ತಕ್ಷಣವಿವಿದ್ಯೆಗಳು ||
ಬರುವುದವಕಾನಿತ್ಯಗಯ್ಯುವೆ |
ಸರುವರೂ ನೀವ್ ಮಾಡಿರೆನ್ನು ತಾ |
ದರದಿ ಹೇಳುತ ಎಲ್ಲರಿಗು ಹಿತನಾಗಿ ನಡೆದಿರ್ದ ||೬

ಅರುಣ ಉದಯ ದೊಳೆದ್ದು ಮು ತೊ |
ದರಸಿ ದೂರ್ವಾ ಪುಷ್ಪಗಳ ತಾ |
ಸರಸ ದಿಂ ಕೊಯ್ದಲ್ಲೆ ಊರಿನ ಮಧ್ಯದೊಳಗಿರುವ ||
ಕರಿ ಮುಖನ ಮಂದಿರಕೆ ಒಯ್ದುದ |
ನಿರಿಸಿ ವಂದನೆ ಗೈದು ಮತ್ತ |
ಲ್ಲಿರುವ ಅರಳೀ ಮರ ಪ್ರದಕ್ಷಿಣೆ ಮಾಡಿ ಬರುತಿರ್ದ ||೭||

ತೆರಳಿ ತನೆದಲಿ ಇವನಿ ಗೀ ಪರಿ |
ಗುರು ಹಿರಿಯರೊಳು ದೇವರಲ್ಲಿಯೆ |
ಪರಮ ಭಕ್ತಿಗಳಿರುವದನು ಕಂಡ್ಹೆತ್ತ ತಾಯ್ತನಕೆ ||
ಬೆರಗು ಬಪ್ಪುದು ಅಚ್ಚರಿಯುದೇ |
ಭರದಿ ಬಂದವ ನಪ್ಪಿ ಮುದ್ದಿಸಿ |
ತರಣಿ ಯಂತೆಯೆ ಜಗವ ಅಘತಿಮಿರಕ್ಕೆ ನೀ ನಾಗು ||೮||

ಎನ್ನುವಂತಹ ಮಾತೆಯಾಶಿಷ |
ವಿನ್ನು ವಿಫಲವ ಹೊಂದುವುದೆ ಸಂ |
ಪನ್ನ ದೇವರ ನಾಮವನು ಅನವರತ ಪಾಡುತಲೀ ||
ತನ್ನ ಗೆಳೆಯರ ಕೂಡಿ ವಿಧ ವಿಧ |
ವನ್ನು ಬಣ್ಣಿಸಿ ದೇವರಾಜಪ |
ವನ್ನು ಭಜನಾ ಸಪ್ತಕಗಳನು ಮಾಡುತಿರು ತಿರ್ದ ||೯||

ಕುಲದ ಧರ್ಮಗಳಂತೆ ವಿದ್ಯೆಯ |
ಕಲಿತು ಅರ್ಥವ ತಿಳಿದು ದೈವವ |
ನೊಲಿಪ ಯೋಚನೆ ಯೊಳಗಿರಲು ಗಾಯತ್ರಿ ಮಂತ್ರವನು ||
ಚಲುವನಿಗೆ ವಿಧ್ವತ್ ಪ್ರಕಾರದಿ |
ತಿಳುಹಿರಲು ಸದ್ಭಕ್ತಿಯಿಂದಲಿ |
ಕೆಲವು ವೇಳೆಯು ನಾಕಡೆಗೆ ಹರಿಸುತ್ತ ತೋಷದಲಿ ||೧೦||

ಇರುತಲಿರೆ ಸದ್ ಬ್ರಮ್ಹ ಚರ್ಯದಿ |
ಬರಲು ಲಗ್ನದ ದಿವಸ ವಾತಗೆ |
ಅರಿತು ಮಾತಾಪಿತೃಗಳದ ನಾಕ್ಷಣದಿ ತಮ್ಮೊಳಗೆ ||
ಅರಸಿ ಕನ್ನೆಯು ತಂದು ಲಗ್ನವ |
ವಿರಚಿಸಿರೆ ಸಂಸಾರ ನೌಕೆಯು |
ಹರಿಯು ಕರುಣಕಟಾಕ್ಷದಿಂದಲಿ ಸಾಗಿಸುತ್ತಿರಲು ||೧೧||

ಈ ವಿಧಗಳಲಿ ದಿನವ ಕಳೆಯು ತ |
ತಾ ವಿನೋದದೊಳಿರಲು ಮತ್ತಾ |
ದೇವ ನೋಲುಮೆಯೊಳೀರ್ವಸುತರನು ಪಡೆದು ಇರುತಿರಲು ||
ಕಾವ ದೇವನ ಕರುಣೆ ಹೋಯಿತೋ |
ಆ ವಿಧವೊ ಎಂತೆಂಬುದರಿಯದೆ |
ದೇವಿಹೊಕ್ಕಳು ಉಗ್ರ ತಾಳಿಯೆ ವೈಲಿರೂಪಿನೊಳು ||೧೨||

ದೇವಿ ತನ್ನಯ ವೈಲಿ ರೂಪದಿ |
ತಾವಿಕಾರದಿ ಬಂದು ದೇಹವ |
ನಾವರಿಸಲಾ ಪರಿಯ ಕಾಣದೆ ತನ್ನ ಮನದೊಳಗೆ ||
ಭಾವ ಭಕುತಿಯೊಳ್ ಭಜಿಸಿ ಎನ್ನನು |
ಕಾವ ಭಾರವು ನಿನ್ನ ದೆನ್ನುತ |
ತಾವಿವೇಕ ದೊಳಿರಲು ತೆರಳಿದ ಳವನ ಬಿಟ್ಟಾಗ ||೧೩||

ಮುಂದೆ ಊರನು ಬಿಡದೆ ಹಲ ಕೆಲ |
ಮಂದಿಗಳ ನೆಳೆದೊಯ್ವ ಕಾಲದಿ |
ಕಂದನೋರ್ವನು ತರುಣಿ ಸಹಿತಲಿ ಸಿಲುಕಿ ಆ ಸುಳಿಗೆ ||
ಬೆಂದು ಮೃತರಾಗಲ್ಕೆ ಮನದಲಿ |
ನೊಂದು ಸಂಸಾರದ ಸುಖಂಗಳ |
ಹಿಂದೆ ದೂಡಿಯೆ ಪೋದ ನಾದೇವನನು ಅರಸುತಲಿ ||೧೪||

ಊರು ಕೇರಿಗಳಲ್ಲಿ ಹುಡುಕುತ |
ದಾರಿ ಕಂಡೊಡನಲ್ಲಿ ಓಡುತ |
ಘೋರಕಾನನದಲ್ಲಿ ಅರಸುತ ಪೋಗುತಲಿ ಮುಂದೆ ||
ಮಾರ ಪಿತನನು ಕಾಣದಲೆ ನದಿ |
ತೀರದಲಿ ಸ್ನಾನಗಳ ವಿರಚಿಸಿ |
ಭೂರಿಭಕುತಿಯೊಳವನ ನಾಮಸ್ಮರಣೆ ಪಠಿಸುತಲಿ ||೧೫||

ಧರೆಯ ಪಾಮರರೆಲ್ಲ ನಿನ್ನಯ |
ಚರಣ ಸೇರಿಯೆ ಮೋಕ್ಷ ಹೊಂದುವ |
ಪರಿಯಿದಾವುದೆನುತ್ತ ಎನಗೀ ಗರುಹುವರು ಯಾರು ||
ಅರಿಯೆ ನೆನ್ನುತ ಯಾಣದಲಿ ಶ್ರೀ |
ಧರರಿರುವ ಶುದ್ಧಿಯನು ಕೇಳುತ |
ಭರದಿ ಪೋಗಿಯೆ ಅಲ್ಲಿ ಅವರಡಿಗೆರಗಿ ನಿಂದಿರಲು ||೧೬||

ಆರು ನೀನೀಗಿಲ್ಲಿ ಬಂದಿಹ |
ಕಾರಣವನರುಹೆನುತ ಶ್ರೀ ಗುರು |
ಭೂರಿಸಂತಸದಿಂದ ಕೇಳಲು ಪೇಳ್ದ ಕೈಮುಗಿದು ||
ಆರು ನಾನೆಂದರಿಯೆ ಸರ್ವವ |
ದೂರ ಮಾಡಿಯೆ ಹರಿಯ ಸೇರುವ |
ದಾರಿಯನು ಅರಸುತ್ತ ಬಂದಿಹ ಪಾಮರನು ನಾನು ||೧೭||

ಜ್ಞಾನ ಹೀನನು ನಾನು ಸರ್ವ |
ಜ್ಞಾನುಭವಿಗಳು ನೀವು ನಿಮ್ಮಯ |
ತ್ರಾಣದಿಂದಲಿ ಎನ್ನ ಈ ಅಜ್ಞಾನವನು ಬಿಡಿಸಿ ||
ಜ್ಞಾನ ಮಾರ್ಗವ ತೋರಿ ಬಹುಸು |
ಜ್ಞಾನ ವೆನ್ನೊಳು ಬೀರಿದೇವನ |
ಕಾಣಿಪುದು ಎನ್ನಂತರಂಗದಿ ಎನುತ ಪ್ರಾರ್ಥಿಸಲು ||೧೮||

ದೇವ ನೊಲುಮೆಯ ಪಡೆಯುವಂತಸು |
ಭಾವ ವಿವನೊಳಗಿಹುದೆನುತ್ತಲಿ |
ತಾವು ತಮ್ಮಯ ದಿವ್ಯದೃಷ್ಟಿಯೊಳರಿತು ಆ ಕ್ಷಣದಿ ||
ದೇವ ನೊಲಿಸುವ ದಿವ್ಯ ಮಂತ್ರವ |
ಕೋವಿದರು ಅಡಿಗೆರಗಿದಗೆ ಸ |
ದ್ಭಾವದಿಂದಲಿ ಪೇಳಿರಲು ದಿನ ದಿನವು ಪಠಿಸುತಲಿ ||೧೯||

ಮುಂದೆ ಸರ್ಕುಳಿಯೆಂಬ ಗ್ರಾಮಕೆ ।
ಬಂದು ಅಲ್ಲಿಯ ದೇವಿಯಿದಿರಲಿ ।
ನಿಂದು ಬಹುಪರಿಯಿಂದ ಪ್ರಾರ್ಥನೆ ಗಯ್ಯುತಲಿ ವರುಷ ॥
ಒಂದ ಕಳೆಯುತ ಕಾಳಿಕೆಯ ನಲ ।
ವಿಂದ ಭಜಿಸು ತಲಿರುವ ಕಾಲದಿ ।
ಬಂದು ತಾಯಿಯು ಅವನಿ ಗಾಹಾರವನು ಇಡುತಿರಲು ॥೨೦॥

ದಿನ ದಿನವು ನಿತ್ಯಾ ಕ್ಷಿ ಕಂಗಳ ।
ವಿನಯ ದಿಂದಲಿ ಮುಗಿಸಿ ಸರ್ವರ ।
ಜನನಿ ಯೆನಿಸಿದ ದೇವಿಯನು ಏ ಕೋತಿಭಾವದಲಿ ॥
ಮನವ ಬೇರೆಡೆ ಗಯ್ಯದರೆ ಬಹು ।
ಘನ ತಪವನಾ ಚರಿಸುತಲ್ಲಿಯೆ ।
ದಿನವ ಕಳೆದನು ಒಂದು ವತ್ಸರ ವಾಕೆಯಿದಿರಿನಲಿ ॥೨೧॥

ಈ ಕ್ಷಿಸೆನ್ನನು ತಾಯೆ ಏಕಮ ।
ಲಾಕ್ಷಿ ನಿನ್ನನು ಮೊರೆಯ ಹೊಕ್ಕೆನು ।
ಶಕ್ಷಿಸೆನ್ನನು ಮರತು ಸರ್ವಪರಾಧವೆಲ್ಲವನು ॥
ಅಕ್ಷರ ವನಾನರಿಯೆ ಕರುಣಕ ।
ಟಾಕ್ಷ ವೆನ್ನೊಳು ಬೀರಿ ಸುಲಭದಿ ।
ಮೋಕ್ಷ ಹೊಂದುವ ದಾರಿಯನು ತೋರೆನುತ ಭಜಿಸುತಲಿ ॥೨೨॥

ಮಾತೆಯಿಂದಲಿ ಸೇವೆ ಗೊಳುವದು ।
ಪಾತ ಕವಿದೆಂದೆನು ತನ್ನಲಿ ।
ನೀ ತರದಿರಿನ್ನೆ ನ ಗಾಹಾರವನೆನಲು ತರುತಿರಲು ॥
ತಾ ತೆರರಳಿ ನದಿ ತೀರದಲಿ ನಿಂ ।
ದಾ ತಳಿರ ಸೇವಿಸಿಯೆ ತನ್ನಯ ।
ಮಾತೆ ಗರಿಯದ ತೆರದೊಳಿರ್ದನು ಆತ ಹರುಷದಲಿ ॥೨೩॥

ಆಪರಾಪರ ವಸ್ತುವಿನ ನಿಜ ।
ರೂಪ ಕಾಣುವ ಯೋಚನೆಗಳಲಿ ।
ತಾಪವೆಲ್ಲವ ಮರೆತು ಹಗಲಿರುಳೆನ್ನದಲೆ ಅಲ್ಲಿ ॥
ಪಾಪ ನಾಶಿನಿ ನದಿಯೊಳ್ಸ್ನಾನವ ।
ತಾ ಪರಮ ಭಕ್ತಿಯೊಳು ಮಾಡುತ ।
ಪಾಪದೂರಿಪ ಹರಿಯ ಮೂರ್ತಿಯಹೃದಯದೊಳಗಿರಿಸಿ ॥೨೪॥

ಪರಮ ಶ್ರದ್ಧಾ ಜಲದ ಪೂಜೆಯ ।
ವಿರಚಿಸಿಯೆ ಸದ್ಭಕ್ತಿ ಭಾವದ ।
ವರಸುಗಂಧಾಕ್ಷತೆಯ ಸುಮಗಳ ನರ್ಪಿಸುತಮುದದಿ ॥
ಒರೆದು ಅವಗಾ ಭರಣ ವಾಗಿಯೆ ।
ಪರಿಪರಿಯ ಸ್ತುತಿಗಳನು ಸ್ತುತಿಸು ತ ।
ಸ್ಥಿರ ಪದವಿ ಕೊಡುವವಗೆ ನೈವೇದ್ಯಗಳೆ ಜಪವೆಂದು ॥೨೫॥

ಹರುಷದಿಂದಲಿ ನುಡಿದು ಮನದಲಿ ।
ಸಿರಿವರನ ರೂಪವನು ಕಾಣುತ ।
ಹರಿನಮೋ ದುರಿತಾರಿ ಕೇಶವ, ವಿಷ್ಣು, ಸಿರಿಯರಸ ॥
ಪರಮ ಮಂಗಲ ಮೂರ್ತಿ ಕರುಣಾ ।
ಕರನೆ ಕಮಲಜ ಪಿತನೆ ಪುಣ್ಯಸು ।
ಚರಿತನೇ ಪರಮೇಶ ಮಿತ್ರನೆ ನಮನಮೋ ಎನುತ ॥೨೬॥

ಇಂತು ಈ ಪರಿ ಸ್ತುತಿಸುತಲಿ ಶ್ರೀ ।
ಕಾಂತನನು ಮನ್ಮನದಿ ತನ್ನಯ ।
ಚಿಂತೆಯೆಲ್ಲವ ಮರೆತು ಮೋಕ್ಷದ ದಾರಿಯರಸುತಲಿ ॥
ಸಂತಸದಿ ಸೀ ಗಳ್ಳಿಗಾಗ ಆ ।
ನಂತನನು ಭಜಿಸುತಲಿ ಪೋಗಿಯೆ ।
ನಿಂತು ನಿದ್ರಾಹಾರವನು ತ್ಯಜಿಸುತಲಿ ಭಕ್ತಿಯಲಿ ॥೨೭॥

ನಿತ್ಯ ಧ್ಯಾನ ನಿರಾಂಜನಾರತಿ ।
ಸ್ತುತ್ಯ ದಾ ನೈವೇದ್ಯ ವರ್ಪಿಸು ।
ತರ್ತಿಯಿಂದಲಿ ಚರಣ ಕಮಲಕ್ಕೆರಗುವೆನು ಎನುತ ॥
ಸತ್ಯ ಮೂರ್ತಿಯು ಮನದೊಳೇ ಕೋ ।
ಚಿತ್ತದಲಿ ಜಪಿಸುತ್ತ ಅಲ್ಲಿಯೆ ।
ಉತ್ತಮದಿ ತಾ ಕಳೆದ ನಾರ್ ತಿಂಗಳನು ಬೇಗದಲಿ ॥೨೮॥

ಆಸಮಯದಲಿ ಭಾರತೀ ವರ ।
ರಾಸು ಪೀಠದಿ ಮೆರೆವ ನೆಲೆಮಾವ್ ।
ವಾಸರಾಗಿಯೆ ಭರಿತ ಕೀರ್ತಿಯೊಳ್ ಮೆರೆಯುತಿರುತಿರಲು ॥
ಕೇಶವನ ಕೃಪೆ ಯಾಯಿ ತೋ ಎಂ ।
ಬಾಸೆ ತೋರುವ ತೆರದಿ ಗುರುಗಳ ।
ಆಸು ಚಕ್ಷುವಿ ಗೀ ತಕಂಡನು ಹರ್ಷ ಧಾರೆಯಲಿ ॥೨೯॥

ಸೀಗೆ ಹಳ್ಳಿಯ ಗ್ರಾಮದಲ್ಲಿಯೆ ।
ಆಗ ಕಳೆದಾರ್ ತಿಂಗಳನು ತಾ ।
ಸಾಗಿದನು ನಡೆಯುತ್ತ ದೇವನ ಮನದಿ ನೆನೆಯುತ್ತ ॥
ಶ್ರೀ ಗುರುವಿಸಾ ದೃಷ್ಟಿಯೋ ಆ ।
ನಾಗ ಶಯನನ ಒಲಮೆಯೋ ಎಂ ।
ಬಾಗ ಬಂದನು ಬೇಗ ನೆಲೆಮಾವ್ ಮಠದ ಬಳಿಗಾಗಿ ॥೩೦॥

ಬಂದು ಸಂತಸದಲ್ಲಿ ಅಲ್ಲಿಯೆ ।
ನಿಂದಿರಲು ಬಹು ಜನರು ಇವನನು ।
ಕಂಡು ಮಾತಾಡಿಸಲು ಮಾತಾಡದಲೆ ಮೌನದಲಿ
ಒಂದೆ ಮನದಲಿ ಹರಿಯ ಧ್ಯಾನಿಪ ।
ಕಂದನನು ಸದ್ಗುರು ವರರು ತಾವ್ ।
ಕಂಡು ಉಪಚರಿಸಿದರು ಆಗಲ್ಲಲೆ ವಿನೋದದಲಿ ॥೩೧॥

ಹರುಷದಿಂದಲ್ಲುಳಿದು ಪ್ರತಿ ದಿನ ।
ವಿರಚಿಸಿಯೆ ಸ್ನಾನಾದಿ ಕರ್ಮವ ।
ಹರಿಯ ನಾಮ ಸ್ಮರಣೆ ಯೊಂದರ ಹೊರತು ಬೇರುಳಿದ ॥
ಪರಿಪರಿಯ ವಿಷಯಾನು ಭೋಗಕೆ ।
ಹೊರಳಿಸದೆ ಮನವನ್ನು ಸದ್ಗುರು ।
ಚರಣ ಕಿಂಕರನಾಗಿ ನಿಂದನು ನಲಿಯು ಮಾವಿನಲಿ ॥೩೨॥

ಕೆಲವು ದಿನ ಮರಳಿರಲು ಗುರುಗಳು ।
ತಿಳಿದು ಇವನಂತರ್ಯ ಭಾವವ ।
ಒಲಿದು ಕೊಟ್ಟವ ದೂತ ಉಪದೇಶವನು ಒಲವಿನಲಿ ॥
ಬಲುಸುಭಕ್ತಿಯೊಳವರ ಚರಣಕೆ ।
ತಲೆಯ ಬಾಗಿಯೆ ನಿಮ್ಮ ಕರುಣಾ ।
ಜಲಧ ಎನ್ನಯ ಮೇಲೆ ಹರಿಯಲಿ ಎಂದು ಕೈಮುಗಿದು ॥
ಅಲ್ಲಿ ಗುರುವಾಶೀರ್ವಚನ ಪಡೆ । ॥೩೩॥

ದಲ್ಲಿ ಇಹ ಬಾಳೂರ ಹತ್ತಿರ ।
ದಲ್ಲಿ ಹರಿವಘನಾಶಿನಿಯ ತಟದಲ್ಲಿ ಸ್ನಾನವನು ॥
ಒಳ್ಳೆ ಮನದಲಿ ಗೈದು ಉಟ್ಟದ ।
ನೆಲ್ಲವನು ಯಜ್ಞೋಪ ವೀತವ ।
ನಲ್ಲೆ ಬಿಸುಡಿತಿಯೆ ನಿಂದ ಹುಟ್ಟಿದ ಮಾರ್ಗದಲಿ ಆಗ ॥೩೪॥

ಕಂಡವರು ಕೆಣಕಿದರು ಮಳ್ಳೆಂ ।
ತೆಂದು ಹೀಯಾಳಿಸಿಯೆ ಕಲ್ಲನು ।
ತಂದು ತಳಿದರು ಪರಿಪರಿಯ ಕಷ್ಟವನು ನೀಡಿದರೂ ॥
ಒಂದನೂಗ್ರಹಿಸದರೆಲೆ ದೇವನ ।
ಒಂದೆ ಮನದಲಿ ಜಪಿಸುತಲಿ ತಾ ।
ಮುಂದೆ ಮುಂದೆಯೆ ಸಾಗುತಿರ್ದನು ಹುಟ್ಟುರೂಪಿನಲಿ ॥೩೫॥

ಕೆಟ್ಟವನು ತಾನೆಂದು ಅರಿಯದೆ ।
ಕೆಟ್ಟಹನು ಇವನೆಂದು ಈತನ ।
ಕೆಟ್ಟ ಮನ ಬಂದಂತೆ ಹೊಡೆಯಲು ಬಿಡದೆ ಛಲವನ್ನು ॥
ಕಷ್ಟರಹಿತನ ಮನ ದೊಳೀಕೋ ।
ನಿಷ್ಟೆಯಿಂದಲಿ ಭಜಿಸುತಲಿ ತಾ ।
ಮುಟ್ಟಿದನು ಗೋಕರ್ಣ ಕ್ಷೇತ್ರಕೆ ಕೆಲವು ದಿವಸದಲಿ ॥ ॥೩೬॥

ನಿತ್ಯ ನಿರ್ಮಲನಾಗಿ ಮೆರೆವಾ ।
ಚಿತ್ತ ಜಾರಿಯ ನಿರ್ಮಲದೇವ ಆ ।
ಕೃತಿವಾಸನ ಪಾದ ಕಮಲವ ಪೂಜಿಸಿಯ ಮತ್ತೆ ।
ಆರ್ತಿಯಿಂದಲಿ ರಾಮ ತೀರ್ಥದಿ ।
ಹತ್ತು ದಿವಸವ ಕಳೆದು ಗೋಕಿವಿ ।
ಕ್ಷೇತ್ರದಿಂದಲಿ ಮುಂದೆ ಸಾಗಿದ ಕಾಲುನಡಿಗೆಯಲಿ ॥೩೭॥

ಅಲ್ಲಿರುವ ಕಾಲದಲಿ ಮುಂಡರು ।
ಕಲ್ಲ ನೆಸೆದರು ಪರಿಪರಿಯ ವಿಧ ।
ದಲ್ಲಿ ಕೊಟ್ಟರು ಚಿತ್ರ ಹಿಂಸೆಯ ಹೇಳ ತೀರದಲಿ ॥
ಎಳ್ಳನಷ್ಟು ಮನವ ಬೇರೆಡೆ ।
ಇಲ್ಲದಲೆ ತಾ ಮಾಡು ತಿರ್ದನು ।
ಫುಲ್ಲಲೋಚನನಂಘ್ರಿ ಕಮಲದ ಧ್ಯಾನಮನಸಿನಲಿ ॥೩೮॥

ದಿನ ದಿನವು ನದಿಯಲ್ಲಿ ಸ್ನಾನವ ।
ಘನ ತರದಿ ಗಯ್ಯುತ್ತ ತನ್ನಯ ।
ಮನದ ಕಲ್ಮಷವನ್ನು ತೊಳೆಯಲು ದೇವಗುಡಿಗಳಲಿ ॥
ವಿನಯದಿಂದಲಿ ಪೋಗಿ ಬಹುವಿಧ ।
ನನೆದು ಆತನ ಚಿಂತನೆಯ ತಾ ।
ಅನವರತ ಮಾಡುತ್ತ ನಡೆದನು ಹಗಲಿರಳು ಎನದೆ ॥೩೯॥

ಮಿಂಚಿನಂತಹ ತೇಜಪೂರ್ಣನು ।
ಪಂಚ ಮುಖ ದಿಂದಿಹನು ಧರೆಯಲಿ ।
ಪಂಚ ಲಿಂಗಾಕಾರ ನಾಗಿಯೆ ಮೆರೆಯುತಿರುತಿರುವಾ ॥
ಪಂಚ ಲಿಂಗಕೆ ಪೋಗಿ ತನ್ನಯ ।
ಸಂಚಿತವ ಪರಿಹರಿಸೆನು ತನಿ ।
ವಂಚನೆಯ ಲವನಡಿಗೆರಗಿ ಪ್ರಾರ್ಥಿಸಿಯೆ ಭಕುತಿಯಲಿ
ಮುಂದೆ ಕೆಲ ತೀರ್ಥಂಗಳೆಲ್ಲವ । ॥೪೧॥

ಮಿಂದು ಶುಚಿಯಾಗುತ್ತ ಕಾಶಿಗೆ ।
ಬಂದು ವಿಶ್ವನಾಥ ದರ್ಶನವನ್ನು ಮಾಡುತಲೀ ॥
ಚಂದದಿಂದಲಿ ಪೋಗಿರುದ್ರನಾ ।
ನಂದ ಸ್ಥಳವಾಗಿಹ ಸ್ಮಶಾನ ದಿ ।
ನಿಂದು ತಪವನ್ನಾಚರಿಸಿದನು ಘೋರರೂಪಿನಲಿ ॥೪೧॥

ಅಲ್ಲಿ ಅವಗಾರನ್ನ ವಿಸ್ತರೋ ।
ಅಲ್ಲಿ ಸ್ಥಳ ವವಗಾರು ತೋರ್ದರೋ ।
ಬಲ್ಲರಾರಿವನೇನ ನೆಂಬೆನೀ ಕೌತುಕವ ನಾನು ।
ಬಲ್ಲಿದನು ಆ ಈಶನೇ ಹೊರ ।
ತಿಲ್ಲವಿದರನು ಅರಿತವರು ಮ ।
ತ್ತಿಲ್ಲೆ ಕಳೆದನು ಆರು ತಿಂಗಳ ಶಿವನ ಧ್ಯಾನದಲಿ ॥೪೨॥

ಅಹಹ ಈಗೇನೆಂಬೆನಲ್ಲಿಯೆ ।
ಗುಹೆಯೊಳಗೆ ತಾನಿಂತು ಮುದದಲಿ ।
ಗುಹಪಿತನ ನಾಮಗಳ ಹಾರವಪೂರ್ಣಪ್ರೇಮದಲಿ ॥
ಸವಿಯುತಲಿ ತನ್ನಯ ತಪವತಾ ।
ಸುವಿನಯದಿ ಸಾಗಿಸುತಲಿರ್ದನು ।
ಕವಲು ಮನವನು ಬಿಟ್ಟು ವಿಶ್ವನಾಥ ಧ್ಯಾನದನು ॥೪೩॥

ಆ ಸಮಯದಲ ಶ್ರೀಧರೇಂದ್ರರು ।
ದೇಶವೆಲ್ಲವ ಸುತ್ತಿ ಆ ಜಗ ।
ದೀಶ ವಿಶ್ವನಾಥ ದರ್ಶನಕೆಂದು ಬೇಗದಲ ॥
ಕಾಶಿಕ್ಷೇತ್ರಕೆ ಬರಲು ಅಲ್ಲಿವ ।
ವಾಸಿಸಿಹ ವಾರ್ತೆಯನು ಕೇಳುತ ।
ಭೂಸುರಾಗ್ರ ಗಣ್ಯರಲ್ಲಿಗೆ ಪೋಗೆ ಹರ್ಷದಲ ॥ ೪೪ ॥

ಕಂಡು ಪಾದಾಂಬುಜಕೆ ತಾನ ಲ ।
ವಿಂದ ಲೆರಗಿಯೆ ಕರವ ಮುಗಿಯುತ ।
ನಿಂದ ಅವಧೂತನನು ಮಧುರೋಕ್ತಿಯಲಿ ಮನ್ನಿಸುತ ॥
ಮುಂದೆ ಈಪರಿ ಹುಟ್ಟು ರೂಪಗ ।
ಳಿಂದ ಲಿಹುದು ಅಯೋಗ್ಯವೆನ್ನುತ ।
ಅಂದು ಲಂಗೋಟಿಯನುಡಿಸಿದರು ಅವರು ಪ್ರೀತಿಯಲಿ ॥ ೪೫ ॥

ಮುದದಿ ಕೈ ಪಿಡಿದೆತ್ತಿ ನೀನತ್ತಿ ।
ಸದವು ಲಾತ್ಮಕದಿಂದ ಧ್ಯಾನಿಸು ।
ಪದುಮನಾಭನ ಕರುಣೆಯಹುದೆಂದೆನುತ ಹರಸುತಲಿ ॥
ಸಡಗರದಿ ಪೊರಮಟ್ಟು ಈಶನ ।
ಪದ ಕಮಲವನು ಭಕ್ತಿ ಭಾವದಿ ।
ವಿಧವಿಧದಿ ಪೂಜಿಸಿಯೆ ಪೋಗಲು ತಮ್ಮ ಕಾರ್ಯದಲಿ ॥ ೪೬ ॥

ಅತ್ತ ಶ್ರೀಧರರಾಗಮಿಸೆ ಮ ।
ತ್ತಿತ್ತ ಆ ಗಂಗೆಯಲಿ ಸ್ನಾನವ ।
ನರ್ತಿಯಿಂದಲಿ ಮಾಡಿ ತಾಹೊರ ಹೊರಟು ಅಲ್ಲಿಂದ ॥
ಚಿತ್ತ ದೇವಿಯೊಳಗೆ ಸರ್ಕಾಳಿ ।
ಯತ್ತ ಬರುತಿರೆ ಚಂಡಿಹವನವು ।
ಉತ್ತಮದಿ ನಡೆಯುತ್ತಿರಲದ ಮುಗಿಸಿ ಬೇಗದಲಿ ॥ ೪೭ ॥

ನಡೆದ ಘೋರಾರಣ್ಯದಲ್ಲಿಯೆ ।
ಅಡಿಗಡಿಗೆ ಆಹಾರವಿಲ್ಲದೆ ।
ನಡ ನೆಡುಗುತಲಿ ಬಾಡಿ ಬಸವಳಿಯುತ್ತ ಕಂಬನಿಯ ॥
ಮಿಡುಕಿಸುತಲಿರುತಿರುವ ಕಾಲದಿ ।
ಒಡನೆ ಕಂಡನು ವಹ್ನಿಯನು ಬಹು ।
ವಿಧದ ಗಡ್ಡೆಯು, ಹಣ್ಣುಗಳ ನಚ್ಚರಿಯ ಮುಖದಿಂದ ॥ ೪೮ ॥

ತ್ವರಿತದಿಂ ಬುಂಜಿಸಿಯೆ ಮುಂದಕೆ ।
ತೆರಳಿ ನೇಪಾಳಕ್ಕೆ ಅಲ್ಲಿಯ ।
ಧೊರೆಯ ಆದರವನ್ನು ಸ್ವೀಕರಿಸುತ್ತ ಶ್ರೀ ಶೈಲ ॥
ಪುರಕೆ ಪೋಗಲ್ಲುಳಿದು ಕೆಲದಿನ ।
ಮರಳಿ ಮಂಗ್ಳೂರಲ್ಲಿ ಶ್ರೀ ಧರ ।
ಗುರುಗಳನೇ ಕಂಡಲ್ಲಿ ನಿಂದನು ಕೆಲವುದಿನ ತಾನು ॥ ೪೯ ॥

ಮರಳಿಕೊಲ್ಲೂರಂಬಿಕೆಯ ಪದ ।
ಕೆರಗಿ ಸೇವೆಯಗಯ್ದು ನಿಜಪುರ ।
ವರ ಸಮೀಪದೊಳಿರುವ ಕೊಳಗೀಬೀಸ ಊರಿನೊಳು ॥
ಇರುವ ಮಾರುತಿ ಗುಡಿಯೊಳ್ ತನ್ನಯ ।
ವರ ತಪವ ನಡೆಸುತ್ತಲಿರುತಿರೆ ।
ಅರಿತರಲ್ಲಿಯೆ ಹತ್ತಿರದೊಳಿಹ ಭಕುತ ಜನರಿದನು ॥ ೫೦ ॥

ಕರದಿ ದಂಡ ಕಮಂಡಲಗಳನು ।
ಧರಿಸಿ ಭಸ್ಮಸು ಲೇಪನಗಳನು ।
ಉರಕೆ ಹುಲಿ ಚರ್ಮವನು ಬಿಗಿದಲ್ಲಿರುವವರನುನೋಡೆ ॥
ಗಿರಿಜೆಯನು ಒಡಗೊಂಡು ಬೆಳ್ಳಿಯ ।
ಗಿರಿಯೊಳಗೆ ಸರಸದಲಿ ಮೆರೆಯುವ ।
ಹರನೆ ತಾಬಂದಲ್ಲಿ ನಿಂತನೊ ಎಂಬ ತೆರವಿಹುದು ॥ ೫೧ ॥

ಅರಿತು ಅಲ್ಲಿಗೆ ಬಹುಜನರು ತಾವ್ ।
ಬರುತ ಬರದಿದ್ದವರಿಗೆಲ್ಲವ ।
ನಸುಹುತಾ ದಿನ ದಿನಕೆ ಬೆಳೆಯಿತು ಭಕ್ತ ಜನಸ್ತೋಮ ॥
ಹರಿಕೆಯುಲ್ಲ ಏನಿತ್ತು ಸದ್ಗುರು ।
ಚರಣ ದರ್ಶನ ಪಡೆದು ತಮ್ಮಯ ।
ದುರಿತ ದೂರಿತೆನುತ್ತ ಕೈ ಮುಗಿಯುತ್ತ ಸಾಗುತಿರೆ ॥೫೨॥

ಇನಿತು ಅಲ್ಲಿಗೆ ಬರುವ ಭಕ್ತಾ ।
ಜನರ ಕಾಣಿಕೆ ದೇವರೊಲುಮೆಯೊಳ್ ।
ಮನೆಯುತಾಯಿಯು ಸಹ ಜನಂಗಳ ಭಕ್ತಿಯೋಗದಲಿ ॥
ಹನುಮನೊಲಿವವರಿಚ್ಛೆಯನು ತಾ ।
ವಿನಯದಿಂದಲಿ ನೀಡೆ ಸರ್ವರ ।
ಘನಸು ಭಕ್ತಿಯ ಸ್ಥಳವದಾಯಿತು ಕೊಳಗಿ ಬಿಸಪುರವು ॥೫೩॥

ಸುತ್ತಿ ದೇಶವನೆಲ್ಲ ಆಗಲು ।
ಇತ್ತ ಬಂದರೆ ಸೀಗೆ ಹಳ್ಳಿಯ !
ದತ್ತ ಜಯಂತೋತ್ಸವಕೆ ಶ್ರೀ ಧರರು ತಾವಾಗ ॥
ಅರ್ತಿಯಿಂ ತಿಳಿದೊಡನೆ ಪೋಗಿಯೆ ॥
ಸ್ತುತ್ಯ ಗಯ್ಯುತನಿಂದಲ್ಲಿಯೆ ।
ಉತ್ತಮರ ಪಾದಕ್ಕೆರಗಿ ಅವಧೂತ ಸಂತಸದಿ ॥೫೪॥

ಇರಲು ಅಲ್ಲಿಯು ಬಣಿವೆ ಗಾದಿನ ।
ಭರದಿ ಬೆಂಕಿಯು ಹೊತ್ತಿ ಸರ್ವರ್‍ರು ।
ಕರಗಿಹೋಯಿತು ಸರುವವೂ ಎಂದೆನುತ ಬೊಬ್ಬಿಡುತ ॥
ಲಿರುವ ಕಾಲದಿ ಶ್ರೀ ಧರರ ವರ ।
ಚರಣ ಕಮಲಕ್ಕೆರಗಿ ತನ್ನಯ ॥
ಕರದಿ ಪಿಡಿದು ಕಮಂಡಲವ ಹೊರ ಹೊರಟರೋಷದಲಿ ॥೫೫॥

ಸ್ಮರಹರನ ಸ್ಮರಪಿತನ ಧ್ಯಾನಿಸಿ ।
ಹಿರಿಯ ಮನದಲಿ ಹನುಮಗೊಂದಿಸಿ ।
ನಿರತ ನಿಮ್ಮಯ ದಾಸನಾಗಿರಲು ಈ ಕ್ಷಣವ ॥
ಊರಿನ ಅನಲನು ಶಾಂತ ಗೊಳಿಸಿಯೆ ।
ಮೆರೆವ ಶಕ್ತಿಯ ನೀಡಿರೆನ್ನುತ ।
ಭರ ಭರದಿ ಸೋಕಿದ ಕಮಂಡಲದಿಂದ ಉದಕವನು ॥೫೬॥

ಪರಮ ಪುಣ್ಯಸುತೀರ್ಥವನು ತಾ ।
ಧರಿಸ ಲೋಸುಗ ಬಂದ ತೆರದಲಿ ।
ವರ ಕಮಂಡಲದಿಂದ ಬಂದಿಹ ವಾರಿಯನು ಕುಡಿದು ॥
ಸರಿಯಲಾಗಲು ಹವ್ಯವಾಹನು ।
ಪರಿಕಿಸಿಯೆ ಅಲ್ಲಿರುವ ಜನತೆಯು ।
ಸರಸದಿಂ ಅವಧೂತನನು ಕೊಂಡಾಡಿ ಸ್ತುತಿಸಿದರು ॥೫೭॥

ಕಿರಿಯ ಗುಡಿ ಬಹುಸುಂದರತೆಯಿಂ ।
ದಿರಿಯದಾಗಲು ಅಲ್ಲೆ ವಾಸಿಪ ।
ಹರಿಜನರು ಒಳಪೋಗಲು ಬಂದರು ಕಾಯುವೆಯುಮುಖದಿ ॥
ಇರವರಿತು ಶ್ರೀ ರಾಮ ಧ್ಯಾನವ ।
ಹಿರಿಯ ಮನದಲಿ ಭಜಿಸುತಿರಲವ ।
ತೆರಳಿದರು ಮುಂದರಿಯಲಾಗದೆ ಸುಮ್ಮನೇ ಹಿಂದೆ ॥೫೮॥

ಗುಡಿಯ ಒಳ ಪೋಗಲಾಗದಿರುತಿರೆ ।
ಕಿಡಕಿಯಲ್ಲಿಯೆನಿತ್ತು ಮಿಜಲ ।
ಬಿಡದೆ ಉಗುಳಿಯೆ ತುಚ್ಛಗೈದರು ಕೋಡಿ ಮಂದಿಗಳು ॥
ಇದನರಿತ ಅವಧೂತರಾಗಲು ।
ಅವರ ದೋಷವ ಕಳೆಯ ಲೋಸುಗ ।
ಒಡನೆ ಪೋದರು ಕಾಶಿ ವಿಶ್ವನಾಥ ದರ್ಶನಕೆ ॥೫೯॥

ಕಾಶಿ ಕ್ಷೇತ್ರದಿ ಕೆಲವು ದಿನವನು |
ವಾಸಿಸಿಯೆ ತಮ್ಮೆಲ್ಲರ ಕಲ್ಮಷ |
ನಾಶವಾಡಿಯೇ ಅಲ್ಲಿರುವ ಗಂಗೆಯನು ತಾವ್ ತಂಮು ||
ತೋಷದಿಂದಿರು ತಿರುವ ಕೊಳಗೀ |
ಬೀಸ ಮಾರುತಿ ಗುಡಿಯ ಶುದ್ಧಿಸಿ |
ವಾಸಿಸಿರ್ದರು ತಮ್ಮ ಕರ್ತವ್ಯವನು ನಡೆಸುತಲೀ ||೬೦||

ಇಷ್ಟರಲ್ಲಿಯೆ ವರುಷ ಕೆಲವನು |
ಶ್ರೇಷ್ಠ ಶ್ರೀಧರ ಗುರುವಿನಲ್ಲಿಯೆ |
ಗಟ್ಟಿಮನದಲಿ ತಳೆದು ಸನ್ಯಾಸದ ಸುದೀಕ್ಷೆಯನು ||
ಅಟ್ಟ ಹಾಸದಿ ಪಡೆದು ಕಾವಿಯ |
ನುಟ್ಟು ಮಾರುತಿ ಮಂದಿರ ಮನ |
ಬಿಟ್ಟು ಬಂದಲ್ಲೇ ಧ್ಯಾನದಿ ಇರುತಲಿರುತಿರಲು ||೬೦||

ಉಗ್ರ ರೂಪವ ತೋರುತಿರುವಾ |
ವ್ಯಾಘ್ರ ಚರ್ಮವ ಬಿಟ್ಟು ತಮ್ಮಯ |
ಅಗ್ರ ಗಣ್ಯರೆನಿಪ್ಪ ಶ್ರೀ ಧರ ಗುರುವಿನಾ ತೆರದಿ ||
ಶೀಘ್ರದಲಿ ಕಾವಿಯನು ಧರಿಸಿ ಸ |
ಮಗ್ರ ಜನರಿಂ ಪ್ರೀತಿಯಿಂದಲಿ |
ಅರ್ಘ್ಯ ಪೂಜಾ ಸೇವೆಯನ್ನು ಗೊಳುತಿರ್ದ ರತಿಯಲಿ ||೬೧||

ಒಮ್ಮೆ ಅಲ್ಲಿ ಮಹಾಜನರುಗಳು |
ಹೆಮ್ಮೆಯಿಂದಲಿ ಬಂದು ಅವರನು |
ದಿಮ್ಮನೇ ಕೋರ್ಟಿಗೆಳೆಯುಲೆತ್ನಿಸಿ ಆಗಲವರ ಹಿಂವೆ ||
ಸುಮ್ಮನೇ ಪೋಗಲ್ಕೆ ಅಲ್ಲಿಯೆ |
ನೆಮ್ಮೆಯಿಂದವ ದೂತರಿರುತಿರೆ |
ಒಮ್ಮೆ ಬಂದನು ಕೋರ್ಟಿನಿಂದಧಿಕಾರರೂಪದಲಿ ||೬೩||

ಹಿಂವೆ ನಡೆವಿಹ ಕತೆಯ ನೆಲ್ಲಂ |
ಚಂದದಿಂ ಪರಿಶೀಲಿಸಿದೆವೀ |
ಗೊಂದು ತಪ್ಪುಗಳಿಲ್ಲ ನಿಮ್ಮದೆನುತ್ತ ತೀರ್ಪಾಯ್ತು ||
ಇಂದಿ "ನಿಂದವ ಧೂತ" ಮಠವೆಂ |
ತೆಂದು ಪೆಸರಾಯ್ತಲ್ಲಿಯಾ ಗುಡಿ |
ಗೆಂದು ಬರಲಿದ ನರಿತು ಸಂತಸದಿಂದಲಲ್ಲಿರ್ದು ||೬೪||

ಸ್ತಾನ ಬರಿದಾಗಿರುತಲಿಹ ಆ |
ಸ್ತಾನವಾಯಿತು ಸುರಪನ ಆ |
ಸ್ತಾನದಂತವಧೂತ ಗುರುವಿನ ತಪ ಪ್ರಭಾವದಲ್ಲಿ ||
ಕ್ಷೋಣಿಯೊಳಗೆಲ್ಲೆಲ್ಲು ಹರಡಿತು |
ಭಾನುವಿನ ಪ್ರಭೆಯಂತೆ ಮಹಿಮೆಯು |
ನೇನ ಬಣ್ಣಿಸಲರವಳವು ಸಾಮಾನ್ಯರಿಂವದನುವು ||೬೫||

ಮಾರುತಿಯ ಮಂದಿರವು ಬಲು ಸೊಗ |
ಸೇರಿ ರಂಜಿಸುತಿರಲು ಹತ್ತಿರ |
ಸೇರಿದವರಿಗೆ ಕೂತ್ರಲುತ್ತಮ ಸ್ಥಳವು ಸಮ್ಮುಖಕೆ ||
ಭೂರಿ ಸಂತಸವಾಗಿ ಜನತೆಗೆ |
ತೋರುವಂತೆಯೆ ಸಿಂಹ ವಿಷ್ಟರ |
ಸೇರಿ ಉರಗನ ಪಂಜ ಹೆಡೆವೂಡ ಗೂಡಿ ಶೋಭಿಸಿಜದು ||೬೬||

ಹತ್ತಿರವೆ ಗೋ ಶಾಲೆ ಸರ್ವತ |
ಚಿತ್ತವನು ಸೆಳೆದಂತೆ ಮೆರೆವುದು |
ನಿತ್ಯವೂ ಹಲವಾರು ಜನರಿಗೆ ಅನ್ನ ದಾನಗಳಾ ||
ಮತ್ತೆ ಪೂರ್ಣಿಮೆ ದಿನರಥೋತ್ಸವ |
ವರ್ತಿಯಿಂದಲಿ ನಡೆಯಲಾದಿನ |
ಭಕ್ತರೆಲ್ಲರೂ ದೂರ ದೂರಗಳಿಂದ ಬರುತಿಹರು ||೬೭||

ವರುಷವೂ ಶ್ರಾವಣ ಮಾಸದಿ |
ಹರಿಪುರಾಣ ಶ್ರವಣವಲ್ಲಿಯೇ |
ನಿರತದಿಂದಲಿ ನಡೆಯುತಿರೆ ಕೇಳಲ್ಕೆ ಬಹು ಜನರು ||
ಸರಸದಿಂದಲಿ ಬಂದು ಕೇಳಿಯೆ |
ಗುರುವಿನಾಶೀರ್ವಾದ ಪಡೆಯುತ ||
ಸರುವರೂ ಸಂತಸದ ಸಾಗರದಲ್ಲಿ ತೇಲ್ತಿಹರು ||೧೮||

ಮುಂದೆ ಚಂಪಾಷಷ್ಠಿಯಲಿ ಆ |
ಮಂದಿರದಿ ದೀಪೋತ್ಸವವು ಬಹು ||
ಚಂದದಿಂದಲಿ ನಡೆಯುತಿರೆ ಅವನೋಡೆ ಬಹು ಜನರು ||
ಬಂದು ಬಹಳಾನಂದವನು ತಾ ಬರ |
ಹೊಂದಿಕೀರ್ತಿಯ ಪಾಡುತಲಿ ಮುದ |
ದಿಂದ ಊಟುಪಚಾರವನು ಸೇವಿಸಿಯೆ ಹೋಗುವುದು ||೧೯||

ಇಂದು ನಾವಾ ಲೋಚಿಸಿರ ಅವ |
ನೊಂದನೂ ಅರಿಯಲಸಾಧ್ಯವು |
ಬಂದ ಆ ಜನರಿಂಗಾ ಹಾರವ ನೊದಗಿಸುವರಾರೊ ||
ತಂದೆ ಮಾರುತಿ ಬಲ್ಲನೇ ಹೊರ |
ತಿಂದು ಧನವಿದ್ದೊಡದು ಸಾಧ್ಯವೆ !
ಒಂದು ನಮ್ಮಯ ಮನಕೆ ತಿಳಿಯದ ತೆರದಿ ಸಾಗುವುದು ||೨೦||

ಆರು ಇವರು ಧನವನಾ ಪರಿ |
ಊರವನು ಸಂರಕ್ಷಿಸಲುದಯೆ |
ದೋರುವರು ಆರಿಹರು ಆಲೋಚಿಸಲು |
ಧೀರ ಹನುಮನಿಗಂಜಿ ಬಂದರೆ | ಇಹನೊಬ್ಬ ಕು ||
ಬೇರ ನಿತ್ತರೆ ಇರಬಹುದು ಮ |
ತ್ತಾರು ಕಾಣರು ಧರೆಯೊಳಿದನಿದಿರಿಸಿಯೆ ನಿಲ್ಲುವರು ||೨೧||

ರಾಷ್ಟ್ರದಾಹಿತಕಾಗಿ ಅಲ್ಲಿಯೆ |
ಅಷ್ಟಗೃಹಗಳ ಶಾಂತಿಯಾಗಲು |
ಎಷ್ಟು ಸಾವಿರ ಜನರು ಸೇರಿದರರಿಯ ಲಸದಳವು ||
ಅಷ್ಟು ಮಂದಿಗೆ ಅಲ್ಲಿ ಅನ್ನವ |
ನಿಷ್ಟು ಸಲಹಿದರಾರು ಗುರುವಿನ |
ಶ್ರೇಷ್ಠ ತಪಬಲ ಮಹಿಮೆಯೇ ಹೊರತಲ್ಲದೇನುಂಟು || ||೨೨||

ವರುಷ ವರುಷ ಕೆಲವು ಬ್ರಾಹ್ಮಣ |
ತರಳರಿಗೆ ಬ್ರಹ್ಮೋಪದೇಶವು |
ಗುರುವಿನಾ ಸಮ್ಮುಖದಿ ವಿಧಿವತ್ತಾಗಿ ನಡೆಯಲಿಕೆ ||
ಕರೆದು ತರುವಂತವರು ಕೆಲವರು !
ವಿರಚಿಸಲು ಆಗದ ಆ ಕೆಲವರಿ ||
ಪರಿಯೊಳಗೆ ಹಲವಾರು ನಡೆಯುತ್ತಿಹುವದು ಆ ಸ್ಥಳದಿ ||೨೩||

ದಿನ ದಿನವು ಭಿಕ್ಷುಕರ ತಂಡವ |
ಕೊನೆಯದೇ ಅಲ್ಲಲ್ಲಿ ಅವರಿಗೆ |
ಉಣ್ಣಲು ಅನ್ನವನಿತ್ತು ಉಪಚರಿಸುತ್ತ ಕೆಲವರಿಗೆ ||
ವಿನಯದಿಂದಲಿ ವಸ್ತ್ರ ಕಂಬಳಿ |
ಯನು ಸಹಾ ಕೊಡುತಿರ್ದರಲ್ಲದೆ |
ಕನಿಕರವ ಪಡುತಿರ್ದರವ ರಾಸ್ಥಿತಿಗಳನು ಕಂಡು ||೨೪||

ಧರೆಯೊಳ್ ಖ್ಯಾತಿಯ ತಳೆದರವಿ ಕುಲ
ದರಸ ರುಕ್ಮಾಂಗದನ ತೆರದಲಿ !
ವಿರಚಿಸುತ ಏಕಾದಶಿಯ ವ್ರತಗಳನು ಸಾಂಗದಲಿ ||
ಸಿರಿಧರನ ಸಂಪೂರ್ಣದಯೆಯನು |
ಸರಸದಿಂದಲಿ ಪಡೆದು ಸದ್ಗುರು |
ವರನು ಕಿಂಕರರಿಂಗೆ ತೀರ್ಥವ ನೀಡಿ ಹರಸುತಲಿ ||೨೫||

ಬಂದವರ ಸಂಪಚರಿಸಿ ದೂರಿದ ।
ತೊಂದರೆಯ ಪರಿಹರಿಸಿ ಎಲ್ಲರ ।
ಒಂದೆ ರೀತಿಯೊಳ್ ಕಂಡು ತಮ್ಮಯ ಕಂದರಾ ತೆರದಿ ॥
ಕುಂದು ಕೊರತೆಯ ನೀಗಿ ಮೋಕ್ಷವ ।
ಹೊಂದುವಾ ಪರಿಯನ್ನು ಬೋಧಿಸಿ ॥
ಮಂದ ಹಾಸದಿ ಮೆರೆಯುತಿರ್ಪರು ಯೋಗ ಪೀಠದಲಿ ॥ ॥೭೬॥

ರಾಮ ನಾಮಾ ಮೃತ ಸುಧೆಯ ಬಲು ।
ಪ್ರೇಮದಿಂದಲಿ ಸವಿ... ಭಜಕರ ।
ಸ್ತೋಮಗಳಿಗದನುಣಿಸಿ ಮಾರುತಿ ಮಂದಿರದಿ ವರುಷ ॥
ರಾಮನವಮಿಯ ವ್ರತವ ನಡೆಸಿಯೆ ।
ಕಾಮಿತಾರ್ಥವ ಪಡೆದು ಸೀತಾ ॥
ರಾಮಧ್ಯಾನಕೆ ತನ್ನ ದೇಹವ ಮೀಸಲಾಗಿಟ್ಟು ॥೭೭॥

ಶರಣರಾರೇ ಕರೆಯುವವರಿಗೆ ।
ದರುಶನವ ಕೊಟ್ಟವರ ಗೃಹದಲಿ ।
ಹರುಷದಿಂದಲಿ ಭಿಕ್ಷೆ ಮುಗಿಸಿಯೆ ಸರಸ ಕರುಣದಲಿ ॥
ತಿರಳುವರು ಬಡ ಬಲ್ಲಿದರು ಎಂ ।
ದಿರದೆ ಸರ್ವರು ಒಂದೆ ಎಂದವ ।
ಕರೆಯುತಲಿ ಮೆರೆಯುತ್ತಲಿರ್ಪರು ಕೊಳಗಿಬೀಸಿನಲಿ ॥ ॥೭೮॥

ಕಂದರಾದರು ಮಾರುತಿಗೆ ಆ ।
ನಂದವಾದರು ಭಕುತ ಜನರಿಗೆ ।
ತಂದೆಯಾದರು ಧರೆಯ ಬಡ ಬಗ್ಗರಿಗೆ ಸರ್ವರಿಗೆ ॥
ಚಂದವಾದರು ಕೊಳಗಿ ಜೀಸಿಗೆ ।
ಬಂದ ಜನರಿಗೆ ಅನ್ನದಾತರು ।
ಇಂದು ತಾವಾಗುತ್ತ ಮೆರೆಯುತಲಿರ್ಪರಾಗವರು ॥೭೯॥